# ನೀನಾರವ ಪೇಳೆನ್ನ ಕಣ್ಣ ಮುಚ್ಚುವೆ

1. **Ref.:** Shri Purandara Dasara Sahitya Part – 4, Krishna Leele, edited by Shri Betageri Krishna Sharma and Shri Bengeri Huchha Rayaru, page No. 57.
2. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 347.
3. **Note:** Lyrics given here are as per Ref. 1. Lyrics as per Ref. 2 are slightly different and has 7 stanzas. We have not considered Ref. 2 wordings.
4. **Note:** This song is not available in the books of Prof. S.K. Ramachandra Rao and also in the books of Gorebala Hanumantha Rayaru.

ರಾಗ: ಕಲ್ಯಾಣಿ ತಾಳ: ಆದಿ

ನೀನಾರವ ಪೇಳೆನ್ನ ಕಣ್ಣ ಮುಚ್ಚುವೆ
ಮೌನಗೊಂಡರಿಯದಂತಿಪ್ಪ ಮಗುವೆ ॥ ಪ ॥

ಅತಿ ಚೆಲುವಿಗೆ ರತಿಪತಿ ಪಿತನೊ – ನೀ
ಶ್ರುತಿ ಸಕಲಾನ್ವಯ ಸನ್ನುತನೊ
ಚತುರ್ದಶ ಭುವನವನಾಳಿದನೋ – ನೀ
ಶತ ತಪ್ಪುಗಳನೆಣಿಸಿದವನೊ? ॥ 1 ॥

ವರ ಗೋಕುಲಕೊಪ್ಪುವ ದೊರೆಯೊ – ನೀ
ಕರಿ ವೈರಿಯ ಮದ ಪರಿಹಾರಿಯೊ
ಗಿರಿಯನುದ್ಧರಿಸಿದ ನಖರುಚಿಯೊ – ನೀ
ಮುರ ದೈತ್ಯನ ಮಡುಹಿದ ಸಿರಿಯೊ? ॥ 2 ॥

ಮಂಗಳ ಶೋಭನ ಮಣಿಖಣಿಯೊ – ನೀ
ಹಿಂಗದೆ ಸ್ತುತಿಪರ ಗತಿದಾನಿಯೊ – ಗೋ-
ಪಾಂಗನೆಯರ ಪ್ರಾಣದ ಧನಿಯೊ – ನೀ
ಸಿಂಗರ ಸೊಬಗಿನ ಶ್ರೀಪತಿಯೊ ॥ 3 ॥

ಆಪತ್ತಿಗೆ ನೆನೆವರ ಗೋಚರನೊ – ನೀ
ಪಾಪ ಸಂಹಾರ ಪುರುಷೋತ್ತಮನೊ
ಚಾಪದಿಂದ ಸುರರ ಗೆಲಿದವನೊ – ಸಾಂ-
ದೀಪನ ಮಗನ ತಂದಿತ್ತವನೊ? ll 4 ll

ಬೆಸಗೊಂಡಳು ಗೋಪಿ ನಸುನಗುತ – ಆಗ
ಯಶೋದೆಗೆ ಚತುರ್ಭುಜ ತೋರಿಸುತ
ಅಸುರಾರಿಯ ಕಂಡು ಮುದ್ದಿಸುತ – ನೀ
ಶಿಶುವಲ್ಲ ಪುರಂದರ ವಿಠಲೆನುತ ll 5 ll

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಬಾಲಕೃಷ್ಣನು ಯಶೋದೆಯ ಕಣ್ಣನ್ನು ಮುಚ್ಚಿದಾಗ, ಅವಳು ಆಡಿದ ಮಾತುಗಳನ್ನು ಈ ಹಾಡು ಒಳಗೊಂಡಿದೆ.

**ರತಿಪತಿ ಪಿತ** = ಕೃಷ್ಣ

**ಅನ್ವಯ** = ಹೊಂದಿಕೆ, ಏಕವಾಕ್ಯತೆ

**ಶತ ತಪ್ಪುಗಳನೆಣಿಸಿದವನೊ : -** ಶಿಶುಪಾಲ ಕೃಷ್ಣನ ಸೋದರತ್ತೆಯ ಮಗ. ಅವನಿಗೆ ಹುಟ್ಟಿದಾಗ ಮೂರನೆಯ ಕಣ್ಣೊಂದಿತ್ತು. ಯಾರಿಂದ ಆತನಿಗೆ ಸಾವು ಬರುವದೋ ಅವನ ಕೈಯಲ್ಲಿ ಕೂಸನ್ನು ಕೊಟ್ಟರೆ, ಮೂರನೆಯ ಕಣ್ಣು ಕಳಚಿ ಬೀಳುವುದೆಂದು ವರವಿತ್ತು. ಕೃಷ್ಣನು ಬಂದು ಆ ಕೂಸನ್ನು ಎತ್ತಿಕೊಂಡಾಗ, ಮೂರನೆಯ ಕಣ್ಣು ಇಲ್ಲದಂತಾಯಿತು. ಆಗ ಶಿಶುಪಾಲನ ತಾಯಿ ಕೂಸನ್ನು ಕಾಯಬೇಕೆಂದು ಶ್ರೀಕೃಷ್ಣನನ್ನು ಬೇಡಿಕೊಂಡಳು. ಆಗ ಶ್ರೀಕೃಷ್ಣನು ಈತನ ನೂರು ತಪ್ಪುಗಳನ್ನು ಕ್ಷಮಿಸುವೆನೆಂದು ವಚನ ಕೊಟ್ಟಿದ್ದನು.

**ಕರಿ ವೈರಿ** = ಕರಿ ರಾಜನನ್ನು ಕಾಡಿದ ಮೊಸಳೆ

**ರುಚಿ** = ಬೆಳಕು, ಕಾಂತಿ

**ಸಿರಿ** = ವೀರತನ

**ಸಾಂದೀಪನಿ** = ಕಾಶ್ಯ ಕುಲದ ಬ್ರಾಹ್ಮಣ. ಆವಂತಿಯಲ್ಲಿ ವಾಸವಾಗಿದ್ದ. ಬಲರಾಮ, ಕೃಷ್ಣ, ಸುಧಾಮರಿಗೆ ವಿದ್ಯಾ ಕಲಿಸಿದ ಗುರುಗಳು. ಗುರುದಕ್ಷಿಣೆಯಾಗಿ ತೀರಿದ ತನ್ನ ಮಗನನ್ನು ತರಬೇಕೆಂದು ಗುರುಗಳು ಶ್ರೀಕೃಷ್ಣನಿಗೆ ಹೇಳಿದರು. ಸಮುದ್ರ ಪ್ರವೇಶಿಸಿ, ಗುರುಪುತ್ರನನ್ನು ಕದ್ದ ಪಂಚಜನನೆಂಬ ರಾಕ್ಷಸನನ್ನು ಕೊಂದು, ಅಲ್ಲಿ ಅವನನ್ನು ಕಾಣದೆ ಯಮಲೋಕಕ್ಕೆ ಹೋಗಿ ಸಾಂದೀಪನ ಮಗನನ್ನು ತಂದು ಒಪ್ಪಿಸಿದರು. (ಭಾಗವತ ೧೦)

**Classification:** Keerthane
**Ankita:** purandara vittala
**Location:** NA
**Category:** Krishna Leele, hari sarvottama
**Group Words:** ranga, Krishna, yashode, gopi, koosu, shishupala, gaja, shatru, asura, mangala, papa, sandipani, hari sarvottama
**Pravachana:** NA
**Explanation:** NA